ಬೆಂಗಳೂರು ಮ್ಯುನಿಸಿಪೆಲ್ ಇಲಾಖಾ.

ತಾರೀಖು 10ನೇ ಜನವರೀ 1877.

17ನೇ ಲೈಸೆನ್ಸ್ ನಂಬರುಉಳ್ಳ ಆರೆಕ್ ಸಾರಾಯಿ ಚಿಲ್ಲರೆ ಬಿಕರೀ ದುಕಾನ್ ಬಗ್ಯೆ ಆದಗು ಮೊಹರ್‌ನಿನಿ ಬಂದು ಮಾಡಲ್ಪಟ್ಟ ದರಖಾಸ್ತುಗಳು ಮ್ಯುನಿಸಿಪೆಲ್ ಕಮ್ಮಿಷ್ನರ ಪ್ರಸಿಡೆಂಟ್ (ಜೆಂಟ್ಲ್ ಆಫ್ ಜಸ್ಟಿಸ್ ಕಾನ್‌ಬಾರೀ ವೆ ಬರ್) ರಿಂದ ಕೊಡಲ್ಪಟ್ಟವೆ ಮತ್ತು ಅವುಗಳು 1877ನೇ ಇಸವೀ ಜನವರೀ 25ನೇ ಮಕ್ಕಂ ಮಧ್ಯಾನ್ಹ ಬಂದು ಘಂಟೆವರಿಗೂ ಸದರೀ ಪ್ರೆಸಿಡೆಂಟರವರಿಂದ ಬರಮಾಡಿ ಕೊಳ್ಳಲ್ಪಡುವವು. ಈ ದುಕಾನ್ ಫಿಬ್ರವರೀ ಗುರ್ಮೀತಾರೀಖಿನಲ್ಲಿ ತೆರಯಲ್ಪಡತಕ್ಕದ್ದಲ್ಲದೆ ನೇ ನಂಬರ್ ಬೀದಿ ಕ್ಯಾಸ್ ಲೈನ್ ಹಳ್ಳೇ ಪೂರ್ ಹೌಸ್ ರಸ್ತೆಯಲ್ಲಿ 22ನೇ ನಂಬರ್ ಮಾಜೀ ಲೈಸೆನ್ಸ್ ದುಕಾನ್‌ಗೆ ಸೇರಿದಂತೆ ಇರುವ ಒಂದು ಪ್ರದೇಶದಲ್ಲಿ ಸದರೀ ದುಕಾನ್ ನೆಲಗೊಂಡಿರತಕ್ಕದ್ದು. ಯಾವ ನಿಬಂಧನೆಗಳನುಸರಿಸಿ ಆರೆಕ್ ಸಾರಾಯಿಯು ಯಾ ಚಿಲ್ಲರೆ ಬಿಕರೀ ಲೈಸೆನ್ಸ್‌ಗಳು ಕೊಡಲ್ಪಡುತವೋ ಅಂತಾ ನಿಬಂಧನೆಗಳನ್ನು ಲಷ್ಕರ್ ಮ್ಯುನಿಸಿಪೆಲ್ ಕಮ್ಮಿಷ್ನರ ಆಫಿಸ್‌ನಲ್ಲಿ ದಿನವಹೀ 11 ಘಂಟೇ ಲಗಾಯತು 4 ಘಂಟೇವರಿಗೂ ನೋಡಿಕೊಳ್ಳಬಹುದು.

ಮಂಜೂರ್ಮಾಡಲ್ಪಟ್ಟ ಮನುಷ್ಯನ ದರಖಾಸ್ತು ಮಾತ್ರವೆ ಏರ್ಪಡಿಸಿಕೊಳ್ಳತಕ್ಕ ಅಧಿಕಾರ ಪ್ರೆಸೀಡೆಂಟರವರು ತಮಗೆ ಉಳಿಸಿಕೊಂಡಿರುತ್ತಾರೆ ಮತ್ತು ದರಖಾಸ್ತು ದಾರನ ನಡತೆಗೂ ಮತ್ತು ಲೈಸೆನ್ಸ್ ಫೀಜ್ ಕ್ರಮವಾಗಿ ಪಾವತೀ ಮಾಡಲಿಕ್ಕೆ ಕೊಟ್ಟು ಜಾಮೀನಿಗೂ ಮುಖ್ಯವಾಗಿ ನಿಗೇ ಕೊಡಲ್ಪಡುವದು.

J. H. Orr, M. D.,
President, Ml. Commission,
Exc. Member of the Bench of Justices.

ನಂದೀದುರ್ಗ ಡಿವೀಜ್ಞ.

ತಾರೀಖು 8ನೇ ಜನವರೀ 1877.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈಗ ಪ್ರಾಪ್ತವಾಗಿರುವ ಕ್ಷಾಮಕ್ಕೋಸ್ಕರ ನಂದೀದುರ್ಗ ಡಿವೀಜ್ಞಗೆ ಸೇರಿದ ಬೆಂಗಳೂರು ಕೋಲಾರ್ ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಹುಲ್ಲುಬನ್ನಿ ಪರಾಜು ಮಾಡುವದನ್ನ ಈ ಸಾಲ್‌ಮಟ್ಟಿಗೆ ಚೀಫ್ ಕಮ್ಮಿಷನರವರ ಅಪ್ಪಣೇ ಮೇರಿಗೆ ಮನ್ನಾ ಮಾಡಲ್ಪಟ್ಟಿರುತೆ.

L. Ricketts,
Offg. Commr.

BANGALORE DISTRICT.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 11ನೇ ಆಕ್ಟೋಬರ್ 1876.

ಸಕಲಜನಗಳಿಗೂ ತಿಳಿಯುವ ಬಗ್ಯೆ ಯಿದರಿಂದ ತಿಳಿಸಲ್ಪಡುವದೇನಂದರೆ,—(ಘಾಸ್ಟು ಯಿಲಾಖೆಗೆ ಸೇರಿದ ಜಂಗ್ಲೀಗಳು ಶಿವಾಯಿ) ಬೆಂಗಳೂರು ಡಿಸ್ಟ್ರಿಕ್ಟು ಜಂಗ್ಲೀಗಳ ಬಾಬತು ಅರಗಿನ ಕಂಟ್ರಾಕ್ಟು 1877—78,—1878—79,—1879-80, 1880—81, ಮತ್ತು 1881—82ನೇ ಇಸವೀಗಳಿಗೆ ಅಂದರೆ, 1877ನೇ ಏಪ್ರಿಲ್ 1ನೇ ಮಕ್ಕಂ ಲಗಾಯತ್ 1882ನೇ ಮಾರ್ಚೀ 31ರ ವರಿಗೆ ಡಿಸ್ಟ್ರಿಕ್ಟು ವಾರಾಗಿ ಚಡ್ ದರಖಾಸ್ತು ದಾರ್‌ಗೆ ಹರಾಜ್ ಮೂಲಕ 1877ನೇ ಮಾರ್ಚೀ 10ನೇ ಮಕ್ಕಂ 12 ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟು ಆಫಿಸ್‌ನಲ್ಲಿ ವಿಕ್ರಯಿಸಲ್ಪಡುವದು.

2. ಐದು ವರುಷಗಳ ವರಿಗೆ, ಅಯಾ ವರುಷದ ಜಡ್ ದರಖಾಸ್ತುದಾರನು, ತನ್ನ ದರಖಾಸ್ತು ಮಂಜೂರಾದ ಮೇಲ್, ಕರ್ನಲೀ ನೋಟ್‌ಗಳು ಯಾ ನಗದು ಹಣ ಆರು ವಿಸ್ತುಗಳಿಗೆ ಯಾ ಮಾಹೇವಾರೀ ಇನ್‌ಸ್ಟಾಲ್‌ಮೆಂಟ್‌ಗಳಿಗೆ ಸವನಾದ ಡಿಪಾಜಿಟ್ಟನ್ನು ಹಾಜರ್ ಮಾಡತಕ್ಕದ್ದು. ಅಂತಾ ಪ್ರತಿ ಐಸ್ತು ಸಾಲೀಯಾನಾ ದರಖಾಸ್ತು ಮೊಬಲಗ್ ಪೈಕೀ ಹನ್ನೆರಡರಲ್ಲಿ ಒಂದು ಹಿಸ್ಸೆಗೆ ಅಥವಾ ಒಟ್ಟು ಕಂಟ್ರಾಕ್ಟು ಮೊಬಲಗ್ ಪೈಕೀ 60ರಲ್ಲಿ ಒಂದು ಹಿಸ್ಸೆಗೆ ಸವನಾಗಿರತಕ್ಕದ್ದು. ಹಾಂಗೆ ಪಾವತೀ ಮಾಡಲಿಕ್ಕೆ ಅವನು ತಪ್ಪಿದ ಪಕ್ಷಕ್ಕೆ ಸದರೀ ಕಂಟ್ರಾಕ್ಟು ಕೂಡ್ಲೆ ಪುನಶ್ಚ ಹರಾಜ್ ಹಾಕಲ್ಪಟ್ಟು ಆ ಮೂಲಕ ಸರ್ಕಾರಕ್ಕೆ ಬರುವ ನುಕ್ಸಾನಿಗೆ ಅವನನ್ನು ಗುರಿಮಾಡಲಾಧೀತು.

3. ಮಂಜೂರಾದ ದರಖಾಸ್ತುದಾರನು ತನ್ನ ಕಂಟ್ರಾಕ್ಟಿನೊಳಗೆ 1877ನೇ ಏಪ್ರೆಲ್ 1ನೇ ಮಕ್ಕಂನಲ್ಲಿ ಪ್ರವೇಶಿಸಿ, ತನ್ನ ಮೊದಲನೇ ಮಾಹೇವಾರೀ ಐಸ್ತನ್ನು 1877ನೇ ಮೇ 15ನೇ ಮಕ್ಕಂ ಮಿನಲ್ಲಾಗಲಿ ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು.